ಕಡೆಗೂ ಬಾಲ್ಯ ಉಳಿಸಿ ಹೋಗುವುದು ಅರ್ಥವಾಗದ ಇಂತಹ ಅದೆಷ್ಟೋ ಹಗರಣಗಳನ್ನಷ್ಟೇ ಅಲ್ಲವೇ?

'ಕಡೀಗೆ ನನ್ನ ಮದ್ವೆಗೆ ಗಂಡು ಗೊತ್ತುಮಾಡಿಕೊಟ್ಟಿದ್ದೂ ನಿನ್ನಮ್ಮ ಅಂಬತ್ತೆಯೇ ಅಲ್ವನೋ?'

ದೇವ್ರೆ! ಏನು ಹೇಳಲು ಹೊರಟಿದ್ದಾಳೆ? ಅದೂ ಕೂಡಾ ಖಂಡಿತಾ ನನಗೆ ಗೊತ್ತಿರಲಿಲ್ಲ. ಪಾರು ಮತ್ತು ಶೇಷತ್ತೆಯ ನಾಪತ್ತೆಯ ನಂತರ ಮನೆಯಲ್ಲಿ ಯಾರೆಂದರೆ ಯಾರೂ ಅವರ ಬಗ್ಗೆ ಮಾತನಾಡಿದ್ದು ಕೂಡಾ ನೆನಪಿರಲಿಲ್ಲ. ಹಾಗೊಂದೆರಡು ಜೀವಿಗಳು ಮನೆಯೆದುರಲ್ಲೇ ಇದ್ದವೆಂಬ ಸೂಕ್ಷ್ಮ ಸುಳಿವೂ ಹತ್ತದಂತೆ, ಯಾವುದೋ ಮರೆವಿನ ಕಾಯಿಲೆಗೆ ಎಲ್ಲರೂ ಒಳಗಾದವರಂತೆ ನಿಗೂಢ ಮೌನ ಹೊತ್ತು ಗತಗಾಲದ ಅಕ್ಷಯಪಾತ್ರೆಗೆ ಸರಿಸಿ ಆನಂತರ ಎಲ್ಲರೂ ಬದುಕಿಬಿಟ್ಟರೋ ಹೇಗೆ? ಆ ಬಗ್ಗೆ ಯಾರನ್ನಾದರೂ ಕೇಳಬೇಕೆಂದು ಕೂಡಾ ಯಾಕೆ ನನಗೆ ಅನ್ನಿಸಿರಲಿಲ್ಲ? ಅಥವಾ ಕೇಳಲು ಹೆದರಿಕೆಯಾಗಿ ಯಾರನ್ನೂ ಕೇಳಲಿಲ್ಲವೋ?

'ಘಟನೆಗಳು ಹೇಗೆ ನಡ್ದುಹೋಗುತ್ತೆ ನೋಡು ಕೇಶವಾ? ಹದಿನೆಂಟು ವರ್ಷಕ್ಕೆ ನಿಂಗಾದ್ರೂ ಏನ್ ಗೊತ್ತಿತ್ತು ಅಲ್ವಾ? ನಿಮ್ಮನೆ ಚೌಕಿಯ ಅರೆಬರೆ ಕತ್ತಲಂಗಳದಲ್ಲಿ ನನ್ನಮ್ಮ ಅದೇನ್ ಹೇಳಿದ್ರೋ, ಅಂಬತ್ತೆ ಅದೇನ್ ಕೇಳ್ಸಿಕೊಂಡ್ರೋ ಒಟ್ಟಿನಲ್ಲಿ ಏನೋ ಆಗಲು ಹೋಗಿ ಮತ್ತೆಂತದೋ ಆಯ್ತು ಮಾರಾಯ! ಆದ್ರೆ ಅದಕ್ಕಂತಾ ನಂಗ್ಯಾರೂ ಬೇಜಾರಿಲ್ಲಪಾ.'

ಅರ್ಥವಾಗದ ಬಾಲ್ಯ! ದೊಡ್ಡವರಾದ ಮೇಲೆ ಅರ್ಥ ಹಚ್ಚುವುದಕ್ಕೆ ನೆನಪಿನಲ್ಲುಳಿದ ಒಂದಷ್ಟು ಅರ್ಥಹೀನ ಘಟನೆಗಳು! ಇವೆಲ್ಲಾ ಶುರುವಾಗಿದ್ದು ನನ್ನಿಂದಲೇ, ಶೇಷತ್ತೆಯಿಂದಲೇ, ಅಮ್ಮನಿಂದಲೇ ಈಗಲೂ ಗೊತ್ತಿಲ್ಲ.

ಪಾರು ಫ್ರಿಡ್ಜ್‌ನಿಂದ ಜ್ಯೂಸ್ ಬಾಟಲ್ ತೆಗೆಯುತ್ತಾ, 'ಕೋಲ್ಡ್ ಇದ್ರೆ ಅಡ್ಡಿಲೇನಾ?' ಕೇಳಿದಳು. ಅದೆಷ್ಟು ಸಹಜವಾಗಿದ್ದಾಳೆ. ಅಥವಾ ಬದುಕೇ ಅವೆಲ್ಲವನ್ನೂ ಕಲಿಸಿಬಿಡುತ್ತದೆಯೇ?

'ಬಾಲ್ಯದಲ್ಲಿ ಎಲ್ರೂ ಎಂತೆಂತದೋ ಕನ್ಸು ಕಾಣೊದೇ ಕಾಣದಪಾ. ಅದ್ರಲ್ಲಿ ಒಂದಾದ್ರೂ ನಿಜವಾಗ್ಬೇಡವನಾ? ಏನೇನೋ ಓದ್ಬೇಕು, ಎಂತೆಂದೋ ಗುಡ್ಡೆ ಹಾಕ್ಬೇಕೂಂತಾ ನಂಗೂ ಭಾಳ ಭಾಳ ಆಸೆಯಿತ್ತು ಮಾರಾಯ. ಪಿಯುಸಿ ಪರೀಕ್ಷೆ ಬೇರೆ ಹತ್ರ ಬರ್ತಾಯಿತ್ತಲಾ? ಕಂಡಾಪಟ್ಟೆ ಓದ್ಕಂತಿದ್ದೆ. ತುಂಬಾ ಓದ್ಬೇಕು, ಕಡೀ ಗಳ್ಗೇಲಿ ಇದ್ದೊಬ್ಬ ಅಮ್ಮನಾ ಚೆನ್ನಾಗ್ ನೋಡ್ಕಂಬೇಕೆನ್ನೋದೆ ಆಗ ನಂಗಿದ್ ಆಸೆ. ಆದ್ರೆ ನೋಡ್, ಪರೀಕ್ಷೆಯೇ ಬರೀಕ್ಕಾಗಲಿಲ್ಲ!'

ಪಾರು ಸಟ್ಟನೆ ಮಾತು ನಿಲ್ಲಿಸಿ, ಒಂದರಗಳಿಗೆ ಹೊರಳಿ ಮುಖ ನೋಡಿದಳು. ನನ್ನ ಪ್ರತಿಕ್ರಿಯೆ ನಿರೀಕ್ಷಿಸುತ್ತಿದ್ದಾಳೆಯೇ? ಆಗಿನಿಂದಲೂ ಅವಳೇ ಮಾತನಾಡುತ್ತಿದ್ದಳು. ಆಗಿನಿಂದಲೂ ಕೇಳುತ್ತಿದ್ದರೂ ಇಷ್ಟು ಹೊತ್ತು ಅದೇನು ಮಾತನಾಡಿದ್ದಳೋ, ಅದರಲ್ಲಿ ಎಷ್ಟು ನನ್ನ ಮನದೊಳಗೆ ಹೊಕ್ಕಿದ್ದವೋ ಹೇಳುವುದು ಕಷ್ಟ. ಎಂದೋ ಆಡಬೇಕಿದ್ದ ಮಾತುಗಳು, ಒಡಲೊಳಗೇ ಉಳಿದು ಹೋದವುಗಳು ಅವು! ಎಂದೋ ಒಂದು ದಿನ ಬೆಳಕು ಕಾಣುತ್ತೆ, ಮಾತಾಗಿ ಹಗುರಗೊಂಡು ಗಾಳಿಗೆ ಹಾರುತ್ತೆಂಬ ಆಸೆಗಳೂ, ರಹಸ್ಯ ಬಯಕೆಗಳೂ ಕೂಡಾ ತೊಟ್ಟು ಕಳಚಿ ನೆಲಕ್ಕುದುರಿದ ಹೂವಿನಂತೆ ಭ್ರಮೆ ಕಳಚಿ ತಳ ಕಚ್ಚಿ ಗರ್ಭದೊಳಗೆ ತಟಸ್ಥವಾಗುಳಿದು ನಿರಂತರ ಪೀಡಿಸಿದ್ದು ಇದೀಗ ಸಲೀಸಾಗಿ ನಿಟ್ಟಿಸುರಿನೊಂದಿಗೆ ಪ್ರಕಟಗೊಳ್ಳುತ್ತಿದೆಯೇ? ಅವಳು ನಿಧಾನವಾಗಿ ಹೇಳುತ್ತಿದ್ದರೆ ಸಾವಧಾನದಿಂದ ಕೇಳಿಸಿಕೊಳ್ಳುವುದಕ್ಕಿಂತಾ ಹೆಚ್ಚಾಗಿ ನನ್ನ ಹೃದಯ ಅನಾವಶ್ಯಕ ಹೊಡೆದುಕೊಳ್ಳುತ್ತಿತ್ತು. ಯಾವುದೋ ಒಂದು ಘಟ್ಟದಲ್ಲಿ ನನ್ನ ಸ್ಮೃತಿಯ ಆಳಕ್ಕೆ ಗಾಳ ಹಾಕಿ ಎಂದಿನದ್ದೋ ಎತ್ತಿ ಬಹಿರಂಗಗೊಳಿಸಿಯೇ ಶತಸಿದ್ಧವೆನ್ನಿಸುವಂತೆ ಮಾತುಗಳು ತಮ್ಮಷ್ಟಕ್ಕೇ ರೂಪುಗೊಂಡು ಹೊರಬರುತ್ತಿರುವಂತೆ ಯಾಕೆ ಅನ್ನಿಸುತ್ತಿದೆಯೋ ತಿಳಿಯದು.